(ಶ್ರೀ ಜಿ. ವಿ. ಆಂಜನಪ್ಪ)

ಪರಿಸ್ಥಿತಿಯು ಬಹಳ ತೀವ್ರವಾಗಿದೆ ಇದರ ಬಗ್ಗೆ ಸರಕಾರ ತೀವ್ರವಾದ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಕೋರಿರುವ ಮನವಿಯನ್ನು ತಮ್ಮ ಮೂಲಕ ಸರಕಾರಕ್ಕೆ ಕಳುಹಿಸಬೇಕೆಂದು ಕೋರಿ ಇಲ್ಲಿ ತಮಗೆ ನಲ್ಲಿಸುತ್ತಿದ್ದೇನೆ.

Strike by the Untrained teachers in Chitradurga

ಶ್ರೀ ಜಿ. ವಿ. ಆಂಜನಪ್ಪ.—ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರಬೇಕಾಗಿರುವುದು. ಈಚೆಗೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಡಿ.ಇ.ಓ. ಅಧಿಕಾರಿಗಳು ಇಲ್ಲಿ ಡಿ.ಎಲ್.ಆರ್.ಸಿ. ಮೂಲಕ ಚುನಾಯಿ ಸಲ್ಪಟ್ಟ ಉಪಾಧ್ಯಾಯರುಗಳನ್ನು ಕೆಲಸದಿಂದ ತೆಗೆದು ತಮಗೆ ಬೇಕಾದವರನ್ನು ನೇಮಕ ಮಾಡಿ ದ್ದಾರೆ ಎಂದು ಹಿಂದೆ ಒಂದು ಸಾರಿ ಸರಕಾರದ ಗಮನವನ್ನು ಸೆಳೆದಿದ್ದೆ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಂತೆ ಕಾಣಲಿಲ್ಲ. ಈಗಲಾದರೂ ಸರಕಾರದವರು ತೀವ್ರವಾದ ಕಾರ್ಯ ಕ್ರಮ ಈ ಬಗ್ಗೆ ತೆಗೆದುಕೊಳ್ಳಬೇಕೆಂದು ಕೋರುತ್ತಿದ್ದೇನೆ. ಇತ್ತೀಚೆಗೆ ಇಲ್ಲಿರುವ ಡಿ.ಇ.ಓ.ರವರು ಅವರ ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ಯಾರು ಅರ್ಹರಾಗಿದ್ದಾರೋ ಅವರನ್ನೆರಾ ತೆಗೆದು ಅನರ್ಹರಾದವರನ್ನು ಅವರ ಜಾಗದಲ್ಲಿ ನೇಮಕ ಮಾಡುತ್ತಿದ್ದಾರೆ. ಇದರಿಂದ ಬಹಳ ಜನರಿಗೆ ಅನ್ಯಾಯವಾಗುತ್ತಿದೆ. ನಾಲ್ಕೈದು ತಿಂಗಳಿಂದಲೂ ಇದರ ಬಗ್ಗೆ ಸರಕಾರಕ್ಕೆ ಮನವಿ ಮಾಡಿಕೊಂಡರೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಸರಕಾರ ಈಗಲಾದರೂ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Strike by the Students of the Bangalore University

ಶ್ರೀ ಜಿ. ವಿ. ಆಂಜನಪ್ಪ.—ಇನ್ನೊಂದು ಮುಖ್ಯವಾದ ವಿಚಾರ. ಈ ನಗರದಲ್ಲಿರುವ ಸುಮಾರು ಇಪ್ಪತ್ತು ಸಾವಿರ ಯೂನಿವರ್ಸಿಟಿ ವಿದ್ಯಾರ್ಥಿಗಳು ಮೂರು ದಿನದಿಂದಲೂ ನತತವಾಗಿ ಮಳೆ ಸುರಿಯುತ್ತಿದ್ದರೂ ಲೆಕ್ಕ ಮಾಡದೆ ಶಾಂತ ರೀತಿಯಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ ಮತ್ತು ಇದನ್ನು ಮುಂದುವರಿಸುತ್ತಿದ್ದಾರೆ. ಇವೊತ್ತಿನ ದಿನ ಇದರಲ್ಲಿ 7—8 ಜನರು ಉಪವಾಸ ಮುಷ್ಕರ ಬೇರೆ ಪ್ರಾರಂಭ ಮಾಡಿದ್ದಾರೆ. ಇದೇ ರೀತಿ ವಿದ್ಯಾರ್ಥಿಗಳ ಮುಷ್ಕರ ಮುಂದು ವರಿಯುತ್ತಿದ್ದರೆ ರಾಜ್ಯದಲ್ಲಿ ವಿಪತ್ಕಾರಕವಾದ ಪರಿಸ್ಥಿತಿ ಉಂಟಾಗುತ್ತದೆ ಮತ್ತು ವಿದ್ಯಾರ್ಥಿಗಳ ಕೆರಿಯರ್ ಕೂಡ ಹಾಳಾಗುತ್ತದೆ ಎಂದು ಅವರ ಪೇರೆಂಟ್ಸ್‌ಗಳು ಮನವಿ ಮಾಡುತ್ತಿದ್ದಾರೆ ಮತ್ತು ಅನೇಕ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುತ್ತದೆ. ಇದನ್ನು ಸರಕಾರ ಇಷ್ಟು ಲಘುವಾಗಿ ಕಾಣಬಾರದು. ಮತ್ತು ನಾವು ವಿದ್ಯಾರ್ಥಿಗಳನ್ನು ಅಲ್ಲಿ ಅಭಿನಂದಿಸಬೇಕಾಗಿದೆ. ಇವರು ಯಾವ ವಿಧವಾದ ಹಿಂಸಾತ್ಮಕತ್ಯಕ್ಕೆ ತೊಡಗದೆ ಶಾಂತ ರೀತಿಯಿಂದ ತಮ್ಮ ಮುಷ್ಕರವನ್ನು ನಡೆಸುತ್ತಾ ಬರುತ್ತಿದ್ದಾರೆ. ಇದರಲ್ಲಿ ವಿದ್ಯಾರ್ಥಿಗಳ ಗುಂಪುಗಳನ್ನು ಒಡೆದು ಬೇರೆ ರೀತಿಯಿಂದ ಪ್ರಚೋದನೆಗೆ ಗುರಿ ಮಾಡಿದರೆ ಇದರಿಂದ ದೇಶದ ಆಸ್ತಿ ಪಾಸ್ತಿಗಳಿಗೆ ಲುಕ್ಸಾನು ಆಗುವ ಸಂದರ್ಭಗಳು ಬರ ಬಹುದು. ಇಂತಹ ಸನ್ನಿವೇಶದಲ್ಲಿ ಇದನ್ನು ತಪ್ಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದಕ್ಕಾಗಿ ನಾನು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡುವುದು ಇಲ್ಲಿರುವ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಕರೆಸಿಕೊಂಡು ಇದರ ಸಮಸ್ಯೆಗಳೇನು ಮತ್ತು ಇರುವ ಅಡ್ಡಿ ಆತಂಕಗಳೇನು ಎನ್ನುವುದನ್ನೆರಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಉಪಸಭಾಪತಿಯವರು.—ಈಗಾಗಲೇ 27ನೇ ತಾರೀಖು ಕಾಲ್ ಅಟ್‌ನ್ಷನ್ ಮೋಷನ್ ಸಂಬಂಧದಲ್ಲಿ ವಿವರಗಳನ್ನು ಸರಕಾರ ಕೊಟ್ಟಿದೆ.

ಶ್ರೀ ಜಿ. ವಿ. ಆಂಜನಪ್ಪ.—ಅದರಿಂದೀಚೆಗೆ ಎಷ್ಟೋ ಹೆಚ್ಚು ತೊಂದರೆಗಳುಂಟಾಗಿವೆ ಅದಕ್ಕಾಗಿ ಸರಕಾರದ ಗಮನವನ್ನು ಸೆಳೆಯಬೇಕಾಗಿ ಬಂದಿದೆ. ಅದಕ್ಕಾಗಿಯೇ ಮುನ್ನೆಚ್ಚರಿಕೆ ನೋಡಿಕೊಂಡು ಅವರ ಕಷ್ಟನಷ್ಟ ಏನೆಂಬುದನ್ನು ತಿಳಿದುಕೊಂಡು ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.